ಸಂ:ಎ೦1/ಎಂಎನ್‌ಜಿ/2605/ಕನ್ವೆಯರ್/2018–19

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಬಳ್ಳಾರಿ ವಿಭಾಗ, ಬಳ್ಳಾರಿ
ದಿನಾಂಕ 05–01–2019

ಇವರಿಗೆ,

ಉಪ ಪ್ರಧಾನ ವ್ಯವಸ್ಥಾಕರು,
ಮೆ॥ ಮೈಸೂರು ಮಿನರಲ್ಸ್ ಲಿಮಿಟೆಡ್,
ಎಂ.ಎಲ್.ನಂ. 2605,
ಸಂಡೂರು

ಮಾನ್ಯರೇ,

ವಿಷಯ:– Diversion of 16.788 Ha Forest land for Pipe line Conveyor belt infavour of M/s Mysore Minerals limited, (Thimmapangudi) Sandur.

ಉಲ್ಲೇಖ:– 1) ಈ ಕಛೇರಿ ಪತ್ರ ಸಂಖ್ಯೆ : M1/MNG/2605/Conveyor/2018-19 Dated :18.12.2018.
2) ವಲಯ ಅರಣ್ಯಾಧಿಕಾರಿ, ಸಂಡೂರ್ರು ಉತ್ತರ ವಲಯ, ಸಂಡೂರು ಇವರ ಪತ್ರ ಸಂಖ್ಯೆ: ಸಂ:ವ.ಅ.ಅ/ಸಂ.ಉ.ವ/ಮೆ॥ಎಂಎಂಎಲ್(ತಿ)/ಕ.ಬೆ.ಪ್ರ/18–19 ದಿನಾಂಕ : 03.01.2019.

--00—

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಪತ್ರದಲ್ಲಿ ನಿರ್ದೇಶನದಂತೆ, ಉಲ್ಲೇಖ(2) ರಲ್ಲಿ ವಲಯ ಅರಣ್ಯಾಧಿಕಾರಿ, ಸಂಡೂರು ಉತ್ತರ ವಲಯ, ಸಂಡೂರು ಇವರು ನಿಮ್ಮ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವರದಿ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾಪಿತ ಪ್ರದೇಶವನ್ನು ಕ್ಷೇತ್ರ ತಪಾಸಣಾ ಸಮಯದಲ್ಲಿ ಕನ್ವೇಯರ್ ಬೆಲ್ಟ್ ಪ್ರದೇಶ ಮತ್ತು ಸರ್ವೀಸ್ ರಸ್ತೆಗೆ ಗುರುತಿಸಿದ ಪ್ರದೇಶಗಳನ್ನು ಪರಿಶೀಲಿಸಲಾಗಿ, ಈಗಾಗಲೇ ಅರಣ್ಯ ಅನುಮೋಧನೆ ಪಡೆದ ಕೂಡು ರಸ್ತೆಯನ್ನು ಹೊರತುಪಡಿಸಿ, ಅದಕ್ಕೆ ಹೊಂದಿಕೊಂಡಿರುವ ನೈಸರ್ಗಿಕವಾಗಿ ಬೆಳೆದಿರುವ ಅರಣ್ಯ ಪ್ರದೇಶವನ್ನು ಪ್ರತ್ಯೇಕವಾಗಿ ಸರ್ವೀಸ್ ರಸ್ತೆಗೆ ಉಪಯೋಗಿಸಲು ಅನುಮೋಧನೆ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕನ್ವೆಯರ್ ಬೆಲ್ಟ್ ನಿರ್ಮಾಣ ಮಾಡಲು ಈಗಾಗಲೇ ಅರಣ್ಯ ಅನುಮೋಧನೆ ಪಡೆದಿರುವ ಕೂಡು ರಸ್ತೆಯನ್ನು ಉಪಯೋಗಿಸಬಹುದಾಗಿದ್ದು, ಅತ್ಯವಶ್ಯಕವಾಗಿ ಬೇಕಾಗುವ ಪ್ರದೇಶದಲ್ಲಿ ಮಾತ್ರ ಸರ್ವಿಸ್ ರಸ್ತೆಯನ್ನು ಪ್ರಸ್ತಾಪಿಸಲು ಹಾಗೂ ಅರಣ್ಯ ಅನುಮೋದನೆ ಪಡೆದ ರಸ್ತೆಯನ್ನು ಕಡಿತಗೊಳಿಸಿ ನಕಾಶೆಯಲ್ಲಿ ನಮೂದಿಸಿ ಪ್ರಸ್ತಾವನೆಯನ್ನು ಮರು ಸಲ್ಲಿಸಲು ಉಪಯೋಗಿ ಸಂಸ್ಥೆಯವರಿಗೆ ಸಾಕಷ್ಟು ಬಾರಿ ದೂರವಾಣಿ ಮೂಲಕ ಸಂಪರ್ಕಿಸಿದಾಗ ಸದರಿಯವರಿಂದ ಯಾವುದೇ ಸಕಾರಾತ್ಮಕ ಪ್ರತಿಕ್ರಿಯೆ ಸ್ವೀಕೃತವಾಗಿರುವುದಿಲ್ಲವೆಂದು ವರದಿ ಸಲ್ಲಿಸಿರುತ್ತಾರೆ.

ಆದುದರಿಂದ ನಿಮಗೆ ಸೂಚಿಸುವುದೇನೆಂದರೆ, ವಲಯ ಅರಣ್ಯಾಧಿಕಾರಿಗಳ ವರದಿಯಲ್ಲಿ ಪ್ರಸ್ತಾಪಿಸಿದಂತೆ ಕನ್ವೆಯರ್ ಬೆಲ್ಟ್ ಪ್ರಸ್ತಾವನೆಗೆ ಸಂಬಂದಿಸಿದಂತೆ ಈಗಾಗಲೇ ಅನುಮೋಧನೆಗೊಂಡಿರುವ ಅರಣ್ಯ ಪ್ರದೇಶವನ್ನು ಉಪಯೋಗಿಸಲು, ಅತ್ಯವಶ್ಯಕವಾಗಿ ಬೇಕಾಗುವ ಪ್ರದೇಶದಲ್ಲಿ ಮಾತ್ರ ಸರ್ವಿಸ್ ರಸ್ತೆಯನ್ನು ಪ್ರಸ್ತಾಪಿಸಲು ಹಾಗೂ ಅರಣ್ಯ ಅನುಮೋದನೆ ಪಡೆದ ರಸ್ತೆಯನ್ನು ಕಡಿತಗೊಳಿಸಿ ನಕಾಶೆಯಲ್ಲಿ ನಮೂದಿಸಿ ಪ್ರಸ್ತಾವನೆಯನ್ನು ಮರು ಸಲ್ಲಿಸಲು ಸೂಚಿಸಿದೆ.

ಮುಂದುವರೆದು, ಕನ್ವೆಯರ್ ಬೆಲ್ಟ್ ಪ್ರಸ್ತಾವನೆಯನ್ನು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ಮತ್ತು ಸಿಇಸಿಯಿಂದ ಮಾನಿಟರಿಂಗ್ ಮಾಡುತ್ತಿದ್ದು, ವಿಳಂಬ ಮಾಡದೇ ಕೂಡಲೇ ಸಲ್ಲಿಸಲು ತಿಳಿಸಿದೆ. ಹಾಗೂ ನಿಮ್ಮಿಂದ ಸದರಿ ಮಾಹಿತಿಯು ಸ್ವೀಕೃತವಾಗದ ಹೊರತು ಮೇಲಾಧಿಕಾರಿಗಳಿಗೆ ಸದರಿ ಪ್ರಸ್ತಾವನೆಯನ್ನು ಸಲ್ಲಿಸಲು ಸಾಧ್ಯವಾಗುತ್ತಿಲ್ಲವೆಂಬ ಅಂಶವನ್ನು ನಿಮಗೆ ತಿಳಿಸಿದೆ.

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬಳ್ಳಾರಿ ವಿಭಾಗ, ಬಳ್ಳಾರಿ